# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-01-2016ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಎಮ್. ಶಿವರಾಜು – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ), (ಸಾರಿಗೆ), (ಯಲಹಂಕ), (ವಿದ್ಯುತ್-ಯಲಹಂಕ), |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | |
| ನೇತ್ರಾ ನಾರಾಯಣ್ – ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ತಾಮಕುಕ), |
| ಉಮೇಸಲ್ಮ – ಸದಸ್ಯರು | ಕಂದಾಯ ಅಧಿಕಾರಿ (ಹೆಬ್ಬಾಳ), |
| ಎ. ಕೋದಂಡರೆಡ್ಡಿ – ಸದಸ್ಯರು | ಉಪ ಕಾನೂನು ಅಧಿಕಾರಿ, |
| ಕೆ. ಪೂರ್ಣಿಮ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ), (ಯೋಜನೆ-ದಕ್ಷಿಣ), (ಸಾರಿಗೆ), |
| ಕುಸುಮ. ಹೆಚ್ – ಸದಸ್ಯರು | |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಜೆ.ಸಿ.ನಗರ), |
| ಅರುಣ ರವಿ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು. |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

### *01]. ವಿಷಯದ ಸಂಖ್ಯೆ: ತೆಆಸ್ಥಾಸ/10/2015-16*

ಆಯುಕ್ತರ ದಿನಾಂಕ: 15-10-2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ದೈನಂದಿನ ಕೆಲಸ ಕಾರ್ಯಗಳಿಗೆ ವಾಹನಗಳ ಅವಶ್ಯಕತೆ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯ ವಾಹನಗಳು ಲಭ್ಯವಿಲ್ಲದ ಪ್ರಯುಕ್ತ, ಕೇಂದ್ರ/ಪೂರ್ವ/ಪಶ್ಚಿಮ/ದಕ್ಷಿಣ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್-1 ಟೆಂಡರ್‌ನಲ್ಲಿ ಪ್ರತಿ ತಿಂಗಳಿಗೆ 2000 ಕಿ.ಮೀ ಅಥವಾ 300 ಗಂಟೆಗಳ ಅವಧಿಗೆ ಟಾಟಾ ಇಂಡಿಕಾ ನಾನ್ ಎ.ಸಿ 185 ವಾಹನಗಳು ಮತ್ತು ಟಾಟಾ ಇಂಡಿಕಾ ಎ.ಸಿ 5 ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಹಾಗೂ ಕೇಂದ್ರ/ಬೊಮ್ಮನಹಳ್ಳಿ/ ದಾಸರಹಳ್ಳಿ/ ಮಹದೇವಪುರ/ ಆರ್.ಆರ್.ನಗರ /ಯಲಹಂಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್-2 ಅಡಿಯಲ್ಲಿ ಪ್ರತಿ ತಿಂಗಳಿಗೆ 2500 ಕಿ.ಮೀ ಅಥವಾ 315 ಗಂಟೆಗಳ ಅವಧಿಗೆ ಟಾಟಾ ಇಂಡಿಕಾ ನಾನ್ ಎ.ಸಿ 185 ವಾಹನಗಳು ಮತ್ತು ಟಾಟಾ ಇಂಡಿಕಾ ಎ.ಸಿ 5 ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು ಸದರಿ ಟೆಂಡರ್ ಪ್ರಕಟಣೆಯನ್ನು ವಿಜಯ ಕರ್ನಾಟಕ (ಕನ್ನಡ) ಹಾಗೂ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ (ಆಂಗ್ಲ) ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ ಹಾಗೂ ಟೆಂಡರ್ ಪ್ರಕಟಣೆಯನ್ನು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು (ನಗರ), ಬೆಂಗಳೂರು ರವರಿಗೆ ಸಲ್ಲಿಸಿ ಸ್ವೀಕೃತಿ ಪಡೆಯಲಾಗಿದ್ದು ಟೆಂಡರ್ ಪ್ರಕಟಣೆ & ಟೆಂಡರ್ ಡಾಕುಮೆಂಟ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ upload ಮಾಡಲಾಗಿರುತ್ತದೆ.

ಟೆಂಡರ್ ಪ್ರಕಟಣೆಯಂತೆ ದಿನಾಂಕ: 12-11-2014 ರಂದು ತಾಂತ್ರಿಕ ಬಿಡ್‌ನ್ನು ಹಾಜರಿದ್ದ ಏಜೆನ್ಸಿಗಳ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ತೆರೆಯಲಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ನಾಲ್ಕು ಏಜೆನ್ಸಿಗಳಾದ ಮೆ॥ ಜಾನಕಿ ಟ್ರಾವೆಲ್ಸ್ ಏಜೆನ್ಸಿ, ಶ್ರೀ ರವೀಂದ್ರ, ಮೆ॥ ಚೇತನ ಟ್ರಾವೆಲ್ಸ್ ಮತ್ತು ಮೆ॥ ಗುರು ಟೂರ್ಸ್ ಎನ್ ಟ್ರಾವೆಲ್ಸ್ ಅರ್ಹತೆಗೊಂಡಿರುತ್ತಾರೆ. ಆದರೆ, ಆರ್ಥಿಕ ಬಿಡ್‌ನ್ನು ದಿನಾಂಕ: 10-12-2014 ರಂದು ತೆರೆದು ಬಿಡ್‌ದಾರರು ನಮೂದಿಸಿರುವ ದರಗಳನ್ನು ಪರಿಶೀಲಿಸಿದಾಗ, ಬೃ.ಬೆಂ.ಮ.ಪಾಲಿಕೆಯಲ್ಲಿ ಪೂರ್ವ, ಪಶ್ಚಿಮ ದಕ್ಷಿಣ ವಲಯ

ಹಾಗೂ ಕೇಂದ್ರ ಕಛೇರಿ ಇದ್ದು ಸದರಿ ವಲಯದ ಸುತ್ತಳತೆ ಸುಮಾರು 10–15 ಕಿ.ಮೀ. ಮಾತ್ರ ಇದ್ದು, ಸದರಿ ಪ್ರದೇಶಗಳ ಗುತ್ತಿಗೆ ವಾಹನಗಳಿಗೆ ಕಾರ್ಯವ್ಯಾಪ್ತಿಯನ್ನು 2000 ಕಿ.ಮೀ.ಗಳಿಗೆ ನಿಗದಿಪಡಿಸಿ ಪ್ಯಾಕೇಜ್–1 ಅಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ಸದರಿ ಪ್ರದೇಶ ವ್ಯಾಪ್ತಿಯಲ್ಲಿ ಗುತ್ತಿಗೆ ವಾಹನಗಳ ಕ್ರಮಿಸುವುದು ಕಡಿಮೆ ಇರುವುದರಿಂದ ಪ್ಯಾಕೇಜ್–1 ಟೆಂಡರ್‌ಗೆ ಬಿಡ್‌ದಾರರು ಪ್ರಾಮುಖ್ಯತೆ ನೀಡಿರುವುದು ಕಂಡುಬಂದಿರುತ್ತದೆ. ದಾಸರಹಳ್ಳಿ, ಯಲಹಂಕ, ಮಹದೇವಪುರ, ಆರ್.ಆರ್.ನಗರ, ಬೊಮ್ಮನಹಳ್ಳಿ ವಲಯ ಪ್ರದೇಶಗಳು ಕೇಂದ್ರ ಕಛೇರಿಯಿಂದ ಸುಮಾರು 15–20 ಕಿ.ಮೀ. ದೂರ ಇದ್ದು, semi urban ಪ್ರದೇಶಗಳಾಗಿರುತ್ತದೆ ಮತ್ತು ವಲಯ ವ್ಯಾಪ್ತಿಯು ದೊಡ್ಡದಾಗಿರುವುದರಿಂದ ಸದರಿ ಪ್ರದೇಶಗಳ ಗುತ್ತಿಗೆ ವಾಹನಗಳಿಗೆ ಕಾರ್ಯವ್ಯಾಪ್ತಿಯನ್ನು 2500ಕಿ.ಮೀ.ಗಳಿಗೆ ನಿಗದಿಪಡಿಸಿ ಪ್ಯಾಕೇಜ್–2 ಅಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿರುತ್ತದೆ. ಗುತ್ತಿಗೆ ವಾಹನಗಳು ಕ್ರಮಿಸಿರುವುದು ಹೆಚ್ಚಾಗಿರುವುದರಿಂದ ಹಾಗೂ ಪ್ಯಾಕೇಜ್–2 ಟೆಂಡರ್‌ನಲ್ಲಿ ಬಿಡ್‌ದಾರರು ಯಾರೂ ಭಾಗವಹಿಸದೇ ಇರುವ ಸಾಧ್ಯತೆ ಇರುವುದರಿಂದ ಇ–ಪ್ರೊಕೂರ್‌ಮೆಂಟ್ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಪ್ಯಾಕೇಜ್–1 ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ನಮೂದಿಸಿರುವ ಕನಿಷ್ಠ ಬಿಡ್‌ನ ಮಾಸಿಕ ದರ ರೂ.22,955/– (ಇಂಡಿಕಾ ನಾನ್ ಏ.ಸಿ ವಾಹನ) ಹಾಗೂ ರೂ.27,311/– (ಇಂಡಿಕಾ ಏ.ಸಿ. ವಾಹನ) ಟೆಂಡರ್ ರದ್ದುಗೊಳಿಸಲು ಹಾಗೂ ಇ–ಪ್ರೊಕೂರ್‌ಮೆಂಟ್ ಮೂಲಕ ಪ್ಯಾಕೇಜ್–1 & ಪ್ಯಾಕೇಜ್–2 ಅಡಿಯಲ್ಲಿ ಅಲ್ಪಾವಧಿ ಮರು ಟೆಂಡರ್‌ನ್ನು (re-tender) ಒಂದೇ ಬಾರಿ ಅಹ್ವಾನಿಸುವುದು ಸೂಕ್ತವಾಗಿರುತ್ತದೆ ಎಂದು ಟೆಂಡರ್ ಮೌಲ್ಯಮಾಪನ ಸಮಿತಿ ಅಭಿಪ್ರಾಯ ಪಟ್ಟಿದ್ದರಿಂದ ಇ–ಪ್ರೊಕೊರ್‌ಮೆಂಟ್ ಅಡಿಯಲ್ಲಿ ಮರು ಟೆಂಡರ್ ಅಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯು ವಿಜಯವಾಣಿ (ಕನ್ನಡ) ಹಾಗೂ ಟೈಂಸ್ ಆಫ್ ಇಂಡಿಯ (ಆಂಗ್ಲ) ದಿನಪತ್ರಿಕೆಗಳಲ್ಲಿ ದಿನಾಂಕ: 17–01–2015 ರಂದು ಪ್ರಕಟಗೊಂಡಿರುತ್ತದೆ ಹಾಗೂ ಟೆಂಡರ್ ಪ್ರಕಟಣೆಯನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಟೆಂಡರ್ ಬುಲೆಟಿನ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು (ನಗರ), ಬೆಂಗಳೂರು ರವರಿಗೆ ಸಲ್ಲಿಸಿ ಸ್ವೀಕೃತಿ ಪಡೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆ & ಡಾಕುಮೆಂಟ್‌ನ್ನು ಇ–ಪ್ರೊಕೊರ್‌ಮೆಂಟ್ ಪೋರ್ಟಲ್‌ನಲ್ಲಿ upload ಮಾಡಲಾಗಿರುತ್ತದೆ.

ಟೆಂಡರ್ ಪ್ರಕಟಣೆಯಂತೆ, ದಿನಾಂಕ: 18–02–2015 ರಂದು ಸಂಜೆ 4:30 ಘಂಟೆಗೆ ತಾಂತ್ರಿಕ ಬಿಡ್ ತೆರೆಯಲು ಅನುವು ಮಾಡಿಕೊಳ್ಳಲಾಗಿತ್ತು. ಆದರೆ, ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರನ್ನು ಪಾಲಿಕೆಯಲ್ಲಿ ಅಹ್ವಾನಿಸಿರುವ / ಅಹ್ವಾನಿಸಲಾಗುವ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಿರುವ ಕ್ರಮ ಮತ್ತು ಸದರಿ ಟೆಂಡರ್ ಬಗ್ಗೆ ಶ್ರೀ ಮಾರೇಗೌಡ, ಮಾಲೀಕರು, ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ಘನ ಉಚ್ಚ ನ್ಯಾಯಾಲಯದಲ್ಲಿ ದಾವೆ WP 2709/2015 and WP 7158/2015 ಹೂಡಿದ್ದು, ಸದರಿ ವಿಷಯವು ದಿನಾಂಕ: 18–02–2015 ರಂದು ಕೋರ್ಟ್‌ಹಾಲ್ ಸಂಖ್ಯೆ–07 ಮುಂದೆ ಬಂದಾಗ ಘನ ನ್ಯಾಯಾಧೀಶರು ಮುಂದಿನ ಆದೇಶ ನೀಡುವರೆಗೂ ತಾಂತ್ರಿಕ ಬಿಡ್ ತೆರೆಯಬಾರದೆಂದು ಮೌಖಿಕವಾಗಿ ನಿರ್ದೇಶನ ನೀಡಿರುವ ಮೇರೆಗೆ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿರುತ್ತದೆ. ಮುಂದುವರೆದಂತೆ, ಸದರಿ ದಾವೆ WP 2709/2015 and WP 7158/2015 ವಿಷಯವು ದಿನಾಂಕ: 10–03–2015 ರಂದು ಕೋರ್ಟ್‌ಹಾಲ್ ಸಂಖ್ಯೆ–13ರ ಮುಂದೆ ಬಂದಾಗ ಘನ ನ್ಯಾಯಾಧೀಶರು ತಾಂತ್ರಿಕ ಬಿಡ್ ತೆರೆದು ಮುಂದಿನ ಕ್ರಮ ಜರುಗಿಸಲು ಮೌಖಿಕವಾಗಿ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, ಇ–ಪ್ರೊಕೊರ್‌ಮೆಂಟ್ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 10–03–2015 ರಂದು ತೆರೆಯಲಾಗಿದ್ದು ಪ್ಯಾಕೇಜ್–1 ಟೆಂಡರ್‌ನಲ್ಲಿ ಮೆ॥ ಚೇತನ ಟ್ರಾವಲ್ಸ್ ಮತ್ತು ಶ್ರೀ ರವೀಂದ್ರ ರವರು ಮತ್ತು ಪ್ಯಾಕೇಜ್–2 ಟೆಂಡರ್‌ನಲ್ಲಿ ಮೆ॥ ಚೇತನ ಟ್ರಾವಲ್ಸ್ ಮತ್ತು ಶ್ರೀ ರವೀಂದ್ರ ರವರು ಭಾಗವಹಿಸಿರುತ್ತಾರೆ.

ಮುಂದುವರೆದಂತೆ, ದಾವೆ WP 2709/2015 and WP 7158/2015 ವಿಷಯವು ಇತ್ಯರ್ಥವಾಗಿ ತೀರ್ಪಿನಲ್ಲಿನ ಅಂಶಗಳನ್ನು ಪರಿಶೀಲಿಸಿ, ಕೈಗೊಳ್ಳಬೇಕಾಗಿರುವ ಮುಂದಿನ ಕ್ರಮದ ಬಗ್ಗೆ ಕಾನೂನು ಅಭಿಪ್ರಾಯ ನೀಡಲು ಕಾನೂನು ಸಲಹೆಗಾರರನ್ನು ಕೋರಲಾಗಿ ಸದರಿಯವರು ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.

1. ದಿನಾಂಕ: 09–10–2014 ಟೆಂಡರ್‌ನಲ್ಲಿ ಕಡಿಮೆ ಬಿಡ್‌ದಾರರಾದ ಮೆ॥ ಜಾನಕಿ ಟ್ರಾವೆಲ್ಸ್‌ರವರಿಗೆ ಕಾರ್ಯಾದೇಶ ನೀಡಬೇಕಾಗಿರುತ್ತದೆ. ಆದರೆ,

2. ದಿನಾಂಕ: 09–10–2014 ಟೆಂಡರ್ ಪ್ರಕ್ರಿಯೆಯನ್ನು ಕೆ.ಟಿ.ಪಿ.ಪಿ ಕಾಯ್ದೆ ಕಾಲಂ 14 ರಂತೆ ರದ್ದುಗೊಳಿಸದ ಹೊರತು, ಕಾನೂನಾತ್ಮಕ ಆಧಾರಗಳಿದ್ದರೂ ಸಹ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರನ್ನು ಕಪ್ಪುಪಟ್ಟಿಗೆ ಸೇರಿಸಲು ಬರುವುದಿಲ್ಲವಾಗಿರುತ್ತದೆ.
3. ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ವಿಫಲರಾಗಿದ್ದಲ್ಲಿ ಮಾತ್ರ ನಿಯಮವಳಿಗಳಂತೆ ಅವಕಾಶ ಕಲ್ಪಿಸಿ ಅವರ ಮನವಿಯನ್ನು ಪರಿಗಣಿಸಿ, ಸಮಂಜಸವಾಗದೇ ಇದ್ದಲ್ಲಿ ಮಾತ್ರ ಕಪ್ಪುಪೆಟ್ಟಿಗೆ ಸೇರಿಸಲು ತೀರ್ಮಾನ ತೆಗೆದುಕೊಂಡು ಸದರಿಯವರಿಗೆ ತಿಳಿಸಬೇಕಾಗಿರುತ್ತದೆ.
4. ಪ್ಯಾಕೇಜ್–2ಕ್ಕೆ ಯಾವುದೇ ಅಡಚಣೆ ಇಲ್ಲದೇ ಇರುವುದರಿಂದ ಹೊಸದಾಗಿ ಟೆಂಡರ್ ಪ್ರಕ್ರಿಯೆ ನಡೆಸಬಹುದಾಗಿರುತ್ತದೆ.

ಅದರಂತೆ, ದಿನಾಂಕ: 18–05–2015 ರಂದು ಸದರಿ ದಾವೆಗಳ ತೀರ್ಪಿನ ಟೆಂಡರ್ ಮೌಲ್ಯಮಾಪನ ಸಮಿತಿಯಿಂದ ಅನುಮೋದನೆ ಪಡೆದು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಗೊಂಡ ಬಿಡ್‌ದಾರರಿಗೆ ಆರ್ಥಿಕ ಬಿಡ್ ತೆರೆಯಲಾಗಿದ್ದು ಬಿಡ್ ದರಗಳನ್ನು ಕೆಳಕಂಡಂತೆ ಸಲ್ಲಿಸಿರುತ್ತಾರೆ.

***PACKAGE-1***

| *Sl. No* | *Agency Name* | *Type of vehicle* | *Tender Rate/month/ per vehicle (in Rs.)* | *No of vehicles* | *Amount (in Rs.) per month* | *Remarks* |
|---|---|---|---|---|---|---|
| *1* | *M/S Janaki Travel Agency* | *Tata Indica Non AC* | *22,955* | *185* | *42,46,675* | *L1* |
| | | *Tata Indica AC* | *27,311* | *5* | *1,36,555* | |
| | | *Total* | | *190* | *43,83,230* | |
| *2* | *Sri Ravindra* | *Tata Indica Non AC* | *24,820* | *185* | *45,91,700* | *L2* |
| | | *Tata Indica AC* | *26,810* | *5* | *1,34,050* | |
| | | *Total* | | *190* | *47,25,750* | |
| *3* | *M/S Chetana Travels* | *Tata Indica Non AC* | *24,849* | *185* | *45,97,065* | *L3* |
| | | *Tata Indica AC* | *26,838* | *5* | *1,34,190* | |
| | | *Total* | | *190* | *47,31,255* | |
| *4* | *M/S Guru Tours & Travels* | *Tata Indica Non AC* | *24,939* | *185* | *46,13,715* | *L4* |
| | | *Tata Indica AC* | *27,495* | *5* | *1,37,475* | |
| | | *Total* | | *190* | *47,51,190* | |

***PACKAGE-2***

| *Sl. No* | *Agency Name* | *Type of vehicle* | *Tender Rate/month/ per vehicle (in Rs.)* | *No of vehicles* | *Amount (in Rs.) per month* | *Remarks* |
|---|---|---|---|---|---|---|
| ***-No Bidders-*** | | | | | | |

ಪ್ಯಾಕೇಜ್–1 ಅಡಿಯಲ್ಲಿನ ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ॥ ಜಾನಕಿ ಟ್ರಾವಲ್ಸ್ ರವರು ನಮೂದಿಸಿರುವ ಒಟ್ಟು 190 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 43,83,230/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ.5,25,98,760/–ಗಳಾಗಿರುತ್ತದೆ. ಆದರೆ, ಪ್ರಸ್ತುತ ಪಾಲಿಕೆ ಅಧಿಕಾರಿಗಳಿಗೆ 180 ವಾಹನಗಳು ಬೇಕಾಗಿದ್ದು, ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 41,36,256/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ.4,96,35,072/–ಗಳಾಗಿರುತ್ತದೆ. ವಿವರಗಳು ಕೆಳಕಂಡಂತೆ ಇರುತ್ತದೆ.

***PACKAGE-1***

| *Sl. No* | *Agency Name* | *Type of vehicles* | *Tender Rate/month/ per vehicle (in Rs.)* | *No of vehicles* | *Amount (in Rs.)* | *Remarks* |
|---|---|---|---|---|---|---|
| 1 | M/S Janaki Travel Agency | Tata Indica Non AC | 22,955 | 179 | 41,08,945 | L1 |
| | | Tata Indica AC | 27,311 | 1 | 27,311 | |
| | | **Total** | | **180** | **41,36,256** | |

ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಲು ಅನುವು ಮಾಡಿಕೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪ್ಯಾಕೇಜ್–1 ಅಡಿಯಲ್ಲಿನ ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ॥ ಜಾನಕಿ ಟ್ರಾವಲ್ಸ್ ರವರಿಗೆ ಒಟ್ಟು 180 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 41,36,256/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ. 4,96,35,072/–ಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಲು ಅನುವು ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅವಗಾಹನೆಗೆ ತರುತ್ತಾ ಟೆಂಡರ್ & ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ: ಆಯುಕ್ತರ ದಿನಾಂಕ: 07–11–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

### *02]. ವಿಷಯದ ಸಂಖ್ಯೆ: ತೆಆಸ್ಥಾಸ/11/2015–16*

ಆಯುಕ್ತರ ದಿನಾಂಕಃ 05–10–2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಬಿ.ಎಸ್.ಶಿವಕುಮಾರಪ್ಪ, ನಿವೃತ್ತ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ರವರು ದಿನಾಂಕ: 11–06–2015 ರಂದು ಮನವಿ ಸಲ್ಲಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಂಗಳೂರು ಇವರ ಆದೇಶದ ಪ್ರಕಾರ ಪಾಲಿಕೆಯ ಆರೋಗ್ಯ ವೈದ್ಯಾಧಿಕಾರಿಗಳು (ತಾಮಕುಕ) ರವರ ಕಛೇರಿಗೆ ನಿಯೋಜನೆ ಮೇಲೆ ಬಂದು 2007 ರಿಂದ 2014ರ ವರೆಗೆ ಕಾರ್ಯನಿರ್ವಹಿಸಿ ವಯೋನಿವೃತ್ತಿ ಹೊಂದಿರುತ್ತೇನೆ. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ: ಇ/2684/14–15, ದಿನಾಂಕ:05–07–2014ರ ಪ್ರಕಾರ ನಾನು ದಿನಾಂಕ:18–07–2014 ರಿಂದ ಇಲ್ಲಿಯವರೆವಿಗೂ ಆರೋಗ್ಯ ವೈದ್ಯಾಧಿಕಾರಿಗಳು (ತಾಮಕುಕ) ಕಛೇರಿಯಲ್ಲಿ ಯಾವುದೇ ಆರ್ಥಿಕ ಸೌಲಭ್ಯವನ್ನು ಪಡೆಯದೇ ಐ.ಇ.ಸಿ ಕಾರ್ಯ ಚಟುವಟಿಕೆಗಳನ್ನು ಹಾಗೂ ಮೇಲಾಧಿಕಾರಿಗಳು ಸೂಚಿಸಿದ ಕೆಲಸಗಳನ್ನು ಚಾಚು ತಪ್ಪದೇ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ ನನಗೆ ತಾವುಗಳು ಗುತ್ತಿಗೆ ಆಧಾರದ ಮೇಲೆ ನೇಮಿಸಿ ಪಾಲಿಕೆ ವತಿಯಿಂದ ಮಾಸಿ ಸಂಚಿತ ಗೌರವಧನ ರೂ.30,000–00 ಗಳನ್ನು ನೀಡಲು ಕೋರಿರುತ್ತಾರೆ.

ಆರೋಗ್ಯ ವೈದ್ಯಾಧಿಕಾರಿಗಳು (ತಾಮಕುಕ), ಯೋಜನಾ ಸಮನ್ವಯಾಧಿಕಾರಿಗಳು (ಆರ್.ಸಿ.ಹೆಚ್), ಮುಖ್ಯ ಆರೋಗ್ಯಾಧಿಕಾರಿಗಳು ಹಾಗೂ ಜಂಟಿ ಆಯುಕ್ತರು (ಆರೋಗ್ಯ) ರವರ ಉಲ್ಲೇಖ–(2) ರಿಂದ (5)ರ ವರೆಗಿನ ವರದಿಯಲ್ಲಿ ಪಾಲಿಕೆಯಲ್ಲಿ ಎನ್.ಯು.ಹೆಚ್.ಎಂ ಕಾರ್ಯಕ್ರಮದಡಿಯಲ್ಲಿ ಶ್ರೀ ಬಿ.ಎಸ್.ಶಿವಕುಮಾರಪ್ಪ, ನಿವೃತ್ತ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳ ಸೇವೆ ಅಗತ್ಯವಾಗಿರುವುದರಿಂದ ಮತ್ತು ಐ.ಇ.ಸಿ ಕಾರ್ಯಚಟುವಟಿಕೆಗಳ ಅನುಷ್ಠಾನ ಮತ್ತು ಪಾಲಿಕೆಯಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಮೇಲ್ವಿಚಾರಣೆಗೆ ಸದರಿಯವರ ಅವಶ್ಯಕತೆ ಹೆಚ್ಚಾಗಿರುತ್ತದೆ. ಅಲ್ಲದೇ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಯ ಎರವಲು ಸೇವೆಯ ಹುದ್ದೆಯು ಪಾಲಿಕೆಯಲ್ಲಿ ಹಾಲಿ ಖಾಲಿ ಇರುತ್ತದೆ. ಸದರಿಯವರು ರೂ.30,000–00 ಸಂಚಿತ ವೇತನ ನೀಡಬೇಕೆಂದು ಕೋರಿದ್ದು, ಕೆ.ಸಿ.ಎಸ್.ಆರ್ ನಿಯಮಾವಳಿ ರೀತ್ಯಾ ಕೊನೆಯ ಮಾಸಿಕ ವೇತನಕ್ಕಿಂತ ಹೆಚ್ಚಿಗೆ ವೇತನ ನೀಡಬಾರದೆಂದು ಉಲ್ಲೇಖಿಸಲಾಗಿರುತ್ತದೆ. ಅದರಂತೆ, ಇವರಿಗೆ ಕೊನೆಯ ನಿವೃತ್ತಿ ಮಾಹೆಯಲ್ಲಿ ವೇತನ ರೂ.53,166–00 ಗಳನ್ನು ಪಡೆದಿರುತ್ತಾರೆ. ಸದರಿ ಹುದ್ದೆಗೆ ಸಂಬಂಧಿಸಿದಂತೆ ವೇತನವು ಕೇಂದ್ರ ಸರ್ಕಾರದ ಅನುದಾನದಿಂದ ಪಾವತಿಯಾಗುತ್ತಿದೆ. ಅದರಂತೆ, ಪಾಲಿಕೆಗೆ ಆರ್ಥಿಕ ಹೊರೆ ಆಗುವುದಿಲ್ಲ ಹಾಗೂ ಸದರಿ ಹುದ್ದೆಗೆ ಬೇರೆ ಅಧಿಕಾರಿಯವರನ್ನು ಖಾಯಂ ಆಗಿ ನಿಯೋಜಿಸುವವರೆಗೂ ಸದರಿ ನಿವೃತ್ತ ಅಧಿಕಾರಿಯವರನ್ನು ಗುತ್ತಿಗೆ ಆಧಾರದ ಮೇಲೆ 'P2958 National Urban Health Mission' ಅಡಿಯಲ್ಲಿ ಮಾಸಿಕ ರೂ.30,000–00 ಸಂಚಿತ ವೇತನದಲ್ಲಿ ನಿಯೋಜಿಸಿಕೊಳ್ಳಬಹುದಾಗಿದೆ ಯೆಂದು ವರದಿಯಲ್ಲಿ ತಿಳಿಸಿರುತ್ತಾರೆ.

1977ರ ಕೆ.ಎಂ.ಸಿ ನಿಯಮಗಳ ನಿಯಮ 20(ಬಿ)ರ ಪ್ರಕಾರ ನಿವೃತ್ತ ಸರ್ಕಾರಿ ಅಧಿಕಾರಿಯನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಬೇಕಾದರ, ಪಾಲಿಕೆಯ ಸಭೆಯ ತೀರ್ಮಾನದ ನಂತರ ಸರ್ಕಾರದಿಂದ ಅನುಮೋದನೆ ಪಡೆದು ನಿಯೋಜಿಸಿಕೊಳ್ಳಲು ಅವಕಾಶವಿರುತ್ತದೆ.

ಈ ಹಿನ್ನಲೆಯಲ್ಲಿ ಪಾಲಿಕೆಯ ಆರೋಗ್ಯ ವೈದ್ಯಾಧಿಕಾರಿ (ತಾಮಕುಕ) ಕಛೇರಿಯಲ್ಲಿ ಖಾಲಿ ಇರುವ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳ ಹುದ್ದೆಗೆ ಎರವಲು ಸೇವೆಯ ಮೇಲೆ ಖಾಯಂ ಆಗಿ ನಿಯೋಜಿಸಕೊಳ್ಳುವ ವರೆವಿಗೂ ಶ್ರೀ ಬಿ.ಎಸ್.ಶಿವಕುಮಾರಪ್ಪ, ನಿವೃತ್ತ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಇವರನ್ನು ಗುತ್ತಿಗೆ ಆಧಾರದ ಮೇಲೆ ಮಾಸಿಕ ರೂ.30,000/-ಗಳ ಸಂಚಿತ ವೇತನದ ಮೇಲೆ ನಿಯೋಜಿಸಿಕೊಳ್ಳಲು ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಲಾಗಿರುವ ಹಿನ್ನಲೆಯಲ್ಲಿ ಮುಖ್ಯ ಆರೋಗ್ಯಾಧಿಕಾರಿಯವರ ವರದಿ ಮೇರೆಗೆ ಮಾನ್ಯ ಆಯುಕ್ತರ ದಿನಾಂಕ: 05-10-2015ರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 09-11-2015ರ ನಿರ್ಣಯ.

**ನಿರ್ಣಯ: ಆಯುಕ್ತರ ದಿನಾಂಕ: 05-10-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

***3]. ವಿಷಯದ ಸಂಖ್ಯೆ: ತೆಆಸ್ಥಾಸ/12/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.11.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರರು (ಸರ್ವಜ್ಞನಗರ) ರವರು ವಾರ್ಡ್ ಸಂಖ್ಯೆ 23ರಲ್ಲಿ ಅನಧೀಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವುದನ್ನು ತೆರವುಗೊಳಿಸುವ ಮೊತ್ತ ರೂ. 2.00 ಲಕ್ಷಗಳಿಗೆ ಕಟ್ಟಡದ ಮಾಲೀಕರಿಂದ ವಸೂಲಿ ಮಾಡುವ ಷರತ್ತಿಗೆ ಒಳಪಡಿಸಿ ಜಾಬ್‌ಸಂಖ್ಯೆ ನೀಡಲು ಕೋರಿದ್ದು, ಜಂಟಿ ಆಯುಕ್ತರು (ಪೂರ್ವ) ರವರು ಶಿಫಾರಸ್ಸು ಮಾಡಿರುತ್ತಾರೆ. ಕೆ.ಎಂ.ಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿಮಾಡಿಕೊಳ್ಳಬೇಕಿದೆ. ಸದರಿ ವೆಚ್ಚವನ್ನು 2015-16 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಬೇಕಿದ್ದು,ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 94 | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **20.00** | **11.25** | **19.25** | **0.00** | **2.00** |

ಮೇಲ್ಕಂಡಂತೆ 2015-16 ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 8.75 ಲಕ್ಷಗಳು ಮಾತ್ರ ಲಭ್ಯವಿದ್ದು, ರೂ. 19.25 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಪ್ರತ್ಯೇಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಲಾಗುವ ವೆಚ್ಚ ರೂ. 2.00 ಲಕ್ಷಗಳನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು. ಆದ್ದರಿಂದ ಹೆಚ್ಚುವರಿ ಮೊತ್ತ ರೂ. 2.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13-11-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## *04]. ವಿಷಯದ ಸಂಖ್ಯೆ: ತೆಆಸ್ಥಾಸ/16/2015-16*

ಆಯುಕ್ತರ ದಿನಾಂಕ: 24.11.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರರು (ಚಿಕ್ಕಪೇಟೆ) ರವರು ವಾರ್ಡ್ ಸಂಖ್ಯೆ 118ರಲ್ಲಿ ಅನಧೀಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವುದನ್ನು ತೆರವುಗೊಳಿಸುವ ಮೊತ್ತ ರೂ. 0.50 ಲಕ್ಷಗಳಿಗೆ ಕಟ್ಟಡದ ಮಾಲೀಕರಿಂದ ವಸೂಲಿ ಮಾಡುವ ಷರತ್ತಿಗೆ ಒಳಪಡಿಸಿ ಜಾಬ್‌ಸಂಖ್ಯೆ ನೀಡಲು ಕೋರಿದ್ದು, ಜಂಟಿ ಆಯುಕ್ತರು (ದಕ್ಷಿಣ) ರವರು ಶಿಫಾರಸ್ಸು ಮಾಡಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿಮಾಡಿಕೊಳ್ಳಬೇಕಿದೆ. ಸದರಿ ವೆಚ್ಚವನ್ನು 2015-16 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಬೇಕಿದ್ದು, ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 94 | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **20.00** | **11.25** | **22.45** | **0.00** | **0.50** |

ಮೇಲ್ಕಂಡಂತೆ 2015-16 ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 8.75 ಲಕ್ಷಗಳು ಮಾತ್ರ ಲಭ್ಯವಿದ್ದು, ರೂ. 22.45 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಪ್ರತ್ಯೇಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಲಾಗುವ ವೆಚ್ಚ ರೂ. 0.50 ಲಕ್ಷಗಳನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು. ಆದ್ದರಿಂದ ಹೆಚ್ಚುವರಿ ಮೊತ್ತ ರೂ. 0.50 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 24-11-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## *5]. ವಿಷಯದ ಸಂಖ್ಯೆ: ತೆಆಸ್ಥಾಸ/17/2015-16*

ಆಯುಕ್ತರ ದಿನಾಂಕ: 02-12-2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಸಿ.ಎಂ.ತಿಮ್ಮೇಶ್, ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18 ರವರು ಮಾನ್ಯ ಆಯುಕ್ತರರವರಿಗೆ ಮನವಿ ಸಲ್ಲಿಸಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ 9ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2015ನೇ ಮೇ ತಿಂಗಳ 5, 6ನೇ ತಾರೀಖಿನಂದು ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಮಲ್ಲೇಶ್ವರಂ, ಬೆಂಗಳೂರು ರಲ್ಲಿ ಆಯೋಜಿಸಲಾಗಿರುತ್ತದೆ. ಸದರಿ ಸಮ್ಮೇಳನದ ಸರ್ವಾಧೀಕ್ಷರಾಗಿ ವಿಚಾರವಾದಿ, ಶಿಕ್ಷಣತಜ್ಞ, ಜನಪರ ಹೋರಾಟಗಾರ, ಸಂಶೋಧಕ, ಬಹುಭಾಷಾ ಕೋವಿಧ, ಮಾರ್ಕ್ಸ್‌ವಾದಿ ಚಿಂತಕ, ಬಹುಕೃತ ವಿದ್ವಾಂಸ, ಉತ್ತಮ ಸಂಘಟಕ, ಶ್ರೇಷ್ಠ ಅಧ್ಯಾಪಕ, ಅನನ್ಯ ಬರಹಗಾರ, ಪತ್ರಕರ್ತ ಡಾ॥ಜಿ.ರಾಮಕೃಷ್ಣ ರವರನ್ನು ಆಯ್ಕೆಮಾಡಲಾಗಿರುತ್ತದೆ ಹಾಗೂ ಸದರಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಆಚರಣೆಯ ಉದ್ದೇಶಿತ ಸಮ್ಮೇಳನವು ನಾಡಿನ ಪ್ರಖ್ಯಾತ ಕಲಾ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಕನ್ನಡ ಜಾಗೃತಿ ಮೆರವಣಿಗೆ ಉದ್ಘಾಟನಾ ಸಮಾರಂಭ, ಸ್ಮರಣ ಸಂಚಿಕೆ ಬಿಡುಗಡೆ, ಅಂಗೈಯಲ್ಲಿ ಬೆಂಗಳೂರು ವಿಶೇಷ ಕೃತಿ ಬಿಡುಗಡೆ, ವಿಚಾರ ಸಂಕಿರಣ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ ಸಾಧಕರಿಗೆ ಗೌರವ ಸನ್ಮಾನ, ಪುಸ್ತಕ ಪ್ರದರ್ಶನ ಮಾರಾಟ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಈ ಸಮ್ಮೇಳನವು ಯಶಸ್ವಿಯಾಗಿ ನೆರವೇರಲು ಅನುವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.10.00 ಲಕ್ಷಗಳ ಅನುದಾನ ನೀಡಲು ಕೋರಿರುತ್ತಾರೆ.

ಪಾಲಿಕೆಯ ಸಭೆಯ ವಿಷಯ ಸಂಖ್ಯೆ:459/2014-15 ದಿನಾಂಕ:20-03-2015 ರಂದು ಅನುಮೋದಿಸಿ, ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ, ಮಾನ್ಯ ಆಡಳಿತಗಾರರ ಅನುಮೋದನೆ ನಡುವಳೀ ವಿಷಯ ಸಂಖ್ಯೆ, 61/2015-16 ದಿ:15-05-2015 ಹಾಗೂ ಸರ್ಕಾರದ ಆದೇಶ ಸಂಖ್ಯೆ ನಇ/608/ ಎಂಎನ್ವೈ 2015 ದಿ:29-

05-2015ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015-16ನೇ ಸಾಲಿನ ಆಯವ್ಯಯದಲ್ಲಿ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 50.00 ಲಕ್ಷಗಳನ್ನು ಮೀಸಲಿರಿಸಿಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 02-12-2015ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕನ್ನಡ ಸಾಹಿತ್ಯ ಪರಿಷತ್ (ರಿ) ರವರಿಗೆ ರೂ.5.00ಲಕ್ಷಗಳ ಅನುದಾನವನ್ನು (ಐದು ಲಕ್ಷ ರೂಪಾಯಿಗಳು) ಮಂಜೂರು ಮಾಡಲು ಸಮಿತಿಯು ಒಪ್ಪಿದೆ.**

### *6]. ವಿಷಯದ ಸಂಖ್ಯೆ: ತೆಆಸ್ಥಾಸ/18/2015-16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 14.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ಶಾಸಕರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳಲು Providing children play equipments and other works in BHCS layout park in Padmanabhanagar ward no. 182 ಕಾಮಗಾರಿಯ ಅಂದಾಜು ಮೊತ್ತ ರೂ. 10.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್ಎಲ್ಎಡಿಎಸ್(ಎಲ್ಎಆರ್)ಸಿ.ಆರ್/20/14-15 ದಿನಾಂಕ 23-6-2015 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ. ಹಾಗೂ ಸರ್ಕಾರದಿಂದ ಸ್ವೀಕರಿಸಲಾದ ಮೊತ್ತವನ್ನು ಪಾಲಿಕೆಯ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಿರುತ್ತದೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ) ದಕ್ಷಿಣ ರವರು ಅನುದಾನದ ಮುಂಗಡವಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 43115 ರಲ್ಲಿ ರೂ. 5.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ದಾಖಲಿಸಿರುತ್ತಾರೆ. 2015-16 ನೇ ಆಯವ್ಯಯದ ಪುಟ ಸಂಖ್ಯೆ 97 ರಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 1.00 ಲಕ್ಷಗಳನ್ನು ಮಾತ್ರ ಮೀಸಲಿರಿಸಿದೆ. ಪದ್ಮನಾಭನಗರ ವಿಧಾನಸಭಾ ಕ್ಷೇತ್ರಾಭಿವೃದ್ಧಿ ಯೋಜನೆ ಅಡಿ ರೂ. 149.90 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಲೆಕ್ಕಶೀರ್ಷಿಕೆ ಪಿ0583 ಅಡಿ ಅನುದಾನದ ಕೊರತೆ ಇರುವುದಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ 15-6-2015ರ ವಿಷಯದ ಸಂಖ್ಯೆ 84/2015-16 ಅನುಮೋದನೆಯಂತೆ ಲೆಕ್ಕಶೀರ್ಷಿಕೆ ಪಿ-0583 ಅಡಿ ಹೆಚ್ಚುವರಿಯಾಗಿ ರೂ. 149.90 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲಾಗಿದೆ. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಮೊತ್ತ ರೂ. 10.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ0583 ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 14-12-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

### *7]. ವಿಷಯದ ಸಂಖ್ಯೆ: ತೆಆಸ್ಥಾಸ/19/2015-16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 15.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರು leachat treatment at S. Bingipura Sy. No. 179 Solid waste landfill site ಕಾಮಗಾರಿಯ ಅಂದಾಜು ಮೊತ್ತ ರೂ. 3.30 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ2200

ಅಡಿ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ನಡವಳಿ ಸಂಖ್ಯೆ 10/2015–16 ದಿನಾಂಕ 02–11–2015 ರಲ್ಲಿ ಅನುಮೋದನೆ ನೀಡಿದೆ. 2015–16 ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ2200 ರ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P2200- Works taken up under 14th Finance commission (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಪ್ರಸ್ತಾವನೆಯ ಮೊತ್ತ |
| **1000.00** | **5703.62** | **0.00** | **–4703.62** | **3.30** |

ಲೆಕ್ಕಶೀರ್ಷಿಕೆ ಪಿ2200 ಅಡಿ ರೂ. 1000.00 ಲಕ್ಷ ಅನುದಾನ ಮೀಸಲಿರಿಸಿದ್ದು, ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲು ಸಲ್ಲಿಸಿರುವ ರೂ.4703.62 ಲಕ್ಷಗಳ ಪ್ರಸ್ತಾವನೆಗೆ 2015–16ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. **ಪ್ರಸ್ತಾವನೆಯ ಮೊತ್ತ ಲೆಕ್ಕಶೀರ್ಷಿಕೆ ಪಿ2200 ಅಡಿ ಜಾಬ್‌ಸಂಖ್ಯೆ ನೀಡಲು ಅನುದಾನ ಲಭ್ಯವಿರುವುದಿಲ್ಲ.** ಲೆಕ್ಕಶೀರ್ಷಿಕೆ ಪಿ2200 ಅಡಿ ಪ್ರಸ್ತಾವನೆಯ ಮೊತ್ತ ರೂ. 3.30 ಲಕ್ಷಗಳ ಅನುದಾನವನ್ನು 2015–16ರ ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಿಕೊಳ್ಳಲಾಗುವುದು. ಪ್ರಸ್ತಾವನೆಯ ಮೊತ್ತ ರೂ. 3.30 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 15–12–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

### *8]. ವಿಷಯದ ಸಂಖ್ಯೆ: ತೆಆಸ್ಥಾಸ/20/2015–16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಸಾಯಿಖಾನೆಯಿಂದ ಹೊರಹೊಮ್ಮುವ ಪ್ರಾಣಿ ಮತ್ತು ಪಕ್ಷಿಗಳ ತ್ಯಾಜ್ಯವನ್ನು ಚಿತಾಗಾರದಲ್ಲಿ ಸುಟ್ಟು ಸಂಸ್ಕರಿಸುವುದರಿಂದ, ಪರಿಸರ ನೈರ್ಮಲ್ಯತೆ ಕಾಪಾಡಬಹುದಾಗಿರುವುದರಿಂದ, ಸತ್ತಪ್ರಾಣಿ ಮತ್ತು ಪಕ್ಷಿಗಳ ತ್ಯಾಜ್ಯವನ್ನು ಸಂಸ್ಕರಿಸಲು ಮೇಡಿ ಅಗ್ರಹಾರದಲ್ಲಿ ಚಿತಾಗಾರ ನಿರ್ಮಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 100.00 ಲಕ್ಷಗಳಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ನಡವಳಿ ಸಂಖ್ಯೆ 202/2015–16 ದಿನಾಂಕ 10–9–2015 ರಲ್ಲಿ ಸದರಿ ಮೊತ್ತವನ್ನು 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಭರಿಸಲು ಅನುಮೋದನೆ ನೀಡಿರುತ್ತಾರೆ.

2015–16 ರ ಆಯವ್ಯಯದಲ್ಲಿ 14 ನೇ ಹಣಕಾಸು ಆಯೋಗದ ಅನುದಾನದ ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ ಪಿ2200 ಅಡಿ ಪರಿಗಣಿಬೇಕಿರುತ್ತದೆ. ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

| ಲೆಕ್ಕಶೀರ್ಷಿಕೆ: P2200- Works taken up under 14th Finance commission | | | | |
|---|---|---|---|---|
| **ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ** | **ಜಾಬ್‌ಸಂಖ್ಯೆ ನೀಡಿರುವ ಮೊತ್ತ** | **ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ** | **ಲಭ್ಯವಿರುವ ಅನುದಾನ** | **ಸದರಿ ಪ್ರಸ್ತಾವನೆಯ ಮೊತ್ತ** |
| **1000.00** | **5703.62** | **0.00** | **–4703.62** | **100.00** |

2015–16 ನೇ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ2200 ಅಡಿ ರೂ. 1000.00 ಲಕ್ಷ ಅನುದಾನ ಮೀಸಲಿರಿಸಿದ್ದು, ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳುವ ದೃಷ್ಟಿಯಿಂದ ಹೆಚ್ಚುವರಿಯಾಗಿ

ಜಾಬ್‌ಸಂಖ್ಯೆ ನೀಡಲು ಸಲ್ಲಿಸಿರುವ ರೂ.4703.62 ಲಕ್ಷಗಳ ಪ್ರಸ್ತಾವನೆಗೆ 2015–16ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಪ್ರಸ್ತಾವನೆಯ ಮೊತ್ತ ರೂ. 100.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ2200 ಅಡಿ ಜಾಬ್‌ಸಂಖ್ಯೆ ನೀಡಲು ಅನುದಾನ ಲಭ್ಯವಿರುವುದಿಲ್ಲ.2015–16ರ ಪರಿಷ್ಕೃತ ಆಯವ್ಯಯದಲ್ಲಿ ವೆಚ್ಚವನ್ನು ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಪ್ರಸ್ತಾಫಿತ ಮೊತ್ತ ರೂ. 100.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ2200 ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16–12–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

### *9]. ವಿಷಯದ ಸಂಖ್ಯೆ: ತೆಆಸ್ಥಾಸ/21/2015–16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of Multipurpose BBMP one building at Ward No. 97 ಕಾಮಗಾರಿಗೆ ಒಟ್ಟು ಅಂದಾಜು ಪಟ್ಟಿ ವೆಚ್ಚ ರೂ. 411.00 ಲಕ್ಷಗಳಿಗೆ ತಯಾರಿಸಲಾಗಿದೆ. 2010–11 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2251 ಅಡಿ ಮೀಸಲಿರಿಸಿದ್ದ ರೂ. 200.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 200.00 ಲಕ್ಷಗಳಿಗೆ 097–11–000035 ಜಾಬ್‌ಸಂಖ್ಯೆ ನೀಡಲಾಗಿದ್ದು, ಉಳಿಕೆ ಮೊತ್ತವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಅಳವಡಿಸಿಕೊಳ್ಳಲು ತಿಳಿಸಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದ ವಿಷಯದ ಸಂಖ್ಯೆ 32(157)/2013–14 ದಿನಾಂಕ 30–12–2013ರಲ್ಲಿ ಅನುಮೋದನೆ ನೀಡಲಾಗಿದೆ. ದಿನಾಂಕ 01–03–2014 ರಂದು ರೂ.358.35 ಲಕ್ಷಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ 1st Part Bill B.R 475/14-15, Dated:31/12/2012, Rs.1,22,12,024-00ಗಳನ್ನು ಪಾವತಿಸಲಾಗಿದ್ದು, 2nd Part Bill ರೂ. 83,67,539–00 ಗಳ ಪಾವತಿಗಾಗಿ ಮಂಡಿಸಲಾಗಿದೆ ಎಂದು ಕಡತದಲ್ಲಿ ದಾಖಲಿಸಲಾಗಿದೆ. ಕಾರ್ಯಪಾಲಕ ಅಭಿಯಂತರರು ಯೋಜನೆ (ಪಶ್ಚಿಮ) ರವರು 2015–16 ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2216 Construction of Multipurpose building at Dayanandanagar in Ward No. 97 ನ Spillover Works ಅಡಿ ರೂ. 358.35 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಉಳಿಕೆ ರೂ. 211.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಲೆಕ್ಕಶೀರ್ಷಿಕೆ ಪಿ–2216 ಅಡಿ ರೂ. 250.00 ಲಕ್ಷಗಳಿಗೆ 2010–11 ನೇ ಸಾಲಿನ ಬೇರೆ ಕಾಮಗಾರಿಗಳಿಗೆ 097–11–000041 ರಿಂದ 097–11–000048 ಜಾಬ್‌ಸಂಖ್ಯೆ ನೀಡಲಾಗಿದ್ದು ಪಿ–2251 ನಲ್ಲಿ ನೀಡಲಾಗಿರುವ ಕಾಮಗಾರಿಗೆ ಪಿ–2216 ಅಡಿ ಭರಿಸಲು ಅವಕಾಶವಿರುವುದಿಲ್ಲ. ಪ್ರಸ್ತಾಫಿತ ಕಾಮಗಾರಿಗೆ ಪಿ–2251 ಅಡಿ ವೆಚ್ಚ ಭರಿಸಬೇಕಿದೆ ಹಾಗೂ 2015–16 ರ ಆಯವ್ಯಯದಲ್ಲಿ ಪಿ–2251 ನ ಮುಂದುವರಿದ ಕಾಮಗಾರಿಗಳಿಗೆ ಮತ್ತು ಬಾಕಿ ಬಿಲ್ಲುಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲ ಹಾಗೂ ಪಿ–2251 ಲೆಕ್ಕಶೀಷಿಕೆ 2015–16 ರ ಆಯವ್ಯಯದ ಪುಸ್ತಕದಲ್ಲಿ ಸೇರ್ಪಡೆಗೊಂಡಿರುವುದಿಲ್ಲ. ಸದರಿ ಕಾಮಗಾರಿಗೆ 2010–11 ನೇ ಸಾಲಿನಲ್ಲಿ ಪಿ–2251 ರೂ. 200.00 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಿರುವುದರಿಂದ ಮತ್ತೊಂದು ಜಾಬ್‌ಸಂಖ್ಯೆ ಅವಶ್ಯವಿರುವುದಿಲ್ಲ. ಅನುಮೋದಿತ ಮೊತ್ತವನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅಳವಡಿಸಿಕೊಂಡು ಕ್ರಮವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಮೊತ್ತ ರೂ. 358.35 ಲಕ್ಷಗಳ ಅನುದಾನವನ್ನು 2015–16ರ ಆಯವ್ಯಯದಲ್ಲಿ ಪಿ2251 ರ ಬದಲಾಗಿ ಪಿ–2216 Spillover ಅಡಿ ಅಳವಡಿಸಿಕೊಳ್ಳಲಾಗಿದೆ. ಆದ್ದರಿಂದ 2015–16 ನ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–2251 ನ Pending Bill ಅಡಿ ಪ್ರಸ್ತಾಫಿತ ಮೊತ್ತ ರೂ. 358.35 ಲಕ್ಷಗಳ ಅನುದಾನವನ್ನು ಅಳವಡಿಸಿಕೊಳ್ಳಲು ಮತ್ತು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಐ.ಎಫ್.ಎಂ.ಎಸ್. ತಂತ್ರಾಂಶದಲ್ಲಿ ಅನುಮೋದಿತ ಮೊತ್ತ

ರೂ. 358.35 ಲಕ್ಷಗಳೆಂದು ಅಳವಡಿಸಿಕೊಂಡು ಅಗತ್ಯ ಕ್ರಮವಹಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17-12-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

***10]. ವಿಷಯದ ಸಂಖ್ಯೆ: ತೆಆಸ್ಥಾಸ/22/2015-16***

ಆಯುಕ್ತರ ದಿನಾಂಕ: 18-12-2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಗಣೇಶ್ ರಾವ್ ಮಾನೆ, ಕಾರ್ಯದರ್ಶಿ, ದಸರಾ ಮಹೋತ್ಸವ ಸಮಿತಿ, ಜೆ.ಸಿ.ನಗರ,(ಮುನಿರೆಡ್ಡಿ ಪಾಳ್ಯ), ಬೆಂಗಳೂರು-06 ರವರು ಮಾನ್ಯ ಆಯುಕ್ತರು ರವರಿಗೆ ಮನವಿ ಸಲ್ಲಿಸಿ. ದಸರಾ ಮಹೋತ್ಸವ ಸಮಿತಿಯು ಪ್ರತಿ ವರ್ಷದಂತೆ ಈ ಬಾರಿಯು ದಸರಾಮಹೋತ್ಸವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಸದರಿ ಮಹೋತ್ಸವ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಲಕ್ಷಾಂತರ ಜನರು ಅತ್ಯಂತ ಸಂಭ್ರಮದಿಂದ ಭಾಗವಹಿಸಿದ್ದರು ಹಾಗೂ ಜಯಚಾಮರಾಜೇಂದ್ರ ನಗರದ ಮುನಿರೆಡ್ಡಿ ಪಾಳ್ಯದ ವ್ಮಠದಹಳ್ಳಿಯಲ್ಲಿ ನಡೆಯುವ ದಸರಾ ಮಹೋತ್ಸವವು ಧಾರ್ಮಿಕ ಮತ್ತು ಸಾಂಸ್ಕೃತಿಕತೆಯ ಸಮಗಮವಾಗಿರುತ್ತದೆ ಹಾಗೂ ಕಳೆದು ವರ್ಷ ಸದರಿ ದಸರಾ ಮಹೋತ್ಸವನ್ನು ಆಚರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ರೂ.45 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಪ್ರಸಕ್ತ ದಸರಾ -2015 ಯಶ್ವಸಿಗೆ ಪಾಲಿಕೆ ವತಿಯಿಂದ ರೂ.50 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಶ್ರೀಯುತ ಸನ್ಮಾನ್ಯ ಆರ್.ಜಗದೀಶ್ ಕುಮಾರ್, ಶಾಸಕರು ಹೆಬ್ಬಾಳ ವಿಧಾನ ಸಭಾ ಕ್ಷೇತ್ರ ರವರು ಅನುದಾನ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಸದರಿ ಎಲ್ಲಾ ಕಾರ್ಯಕ್ರಮಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುದಾನ ನೀಡಲು ಕೋರಿರುತ್ತಾರೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015-16ನೇ ಸಾಲಿನ ಆಯವ್ಯಯದಲ್ಲಿ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆ ಪಿ-0010 ರ ಅಡಿಯಲ್ಲಿ ದಸರಾ ಮಹೋತ್ಸವ (ಮುನಿರೆಡ್ಡಿಪಾಳ್ಯ, ರಾಜಮಹಲ್ ಗುಟ್ಟಳ್ಳಿ, ವಿಶ್ವನಾಥನಾಗೇನಹಳ್ಳಿ ಮನ್ನರಾಯನಪಾಳ್ಯ) ಲೆಕ್ಕಶೀರ್ಷಿಕೆಯಡಿಲ್ಲಿ ರೂ.65.00 ಲಕ್ಷಗಳ ಅನುದಾನ ಮೀಸಲಿರಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ದಸರಾ ಮಹೋತ್ಸವ ಸಮಿತಿ, ಜೆ.ಸಿ.ನಗರ,(ಮುನಿರೆಡ್ಡಿ ಪಾಳ್ಯ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 18-12-2015ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ, ದಸರಾ ಮಹೋತ್ಸವ ಸಮಿತಿ, ಜೆ.ಸಿ.ನಗರ (ಮುನಿರೆಡ್ಡಿಪಾಳ್ಯ), ಬೆಂಗಳೂರು. ಸಂಸ್ಥೆಗೆ ಆಯವ್ಯಯದಲ್ಲಿಯು ಸಹ ಹಣ ನಿಗಧಿಪಡಿಸಿದೆ. ಮಾನ್ಯ ಆಯುಕ್ತರು ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವುದನ್ನು ಒಪ್ಪಲು ಸಮಿತಿ ತೀರ್ಮಾನಿಸಿತು.**

***11]. ವಿಷಯದ ಸಂಖ್ಯೆ: ತೆಆಸ್ಥಾಸ/23/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯ, ಯಲಹಂಕ ವಿಭಾಗದ ಕೆಂಪೇಗೌಡ ವಾರ್ಡ್ ಸಂಖ್ಯೆ: 01ರಲ್ಲಿ 2012-13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ.1771 ಅಡಿಯಲ್ಲಿ ರೂ.169.00 ಲಕ್ಷಗಳಿಗೆ ಜಾಬ್ ಸಂಖ್ಯೆ ಅನುಮೋದನೆ ನೀಡಿ ಹಣವನ್ನು ಗೃಹ ಮಂಡಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಉಳಿಕೆ ಹಣ ರೂ.150.50ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ವಿಷಯ ಸಂಖ್ಯೆ: ವಾ.ಮ.ಸಾ.ಕಾ. ಸ್ಥಾ.ಸ/256/2014-15, ದಿನಾಂಕ: 07.01.2015ರಲ್ಲಿ ಅನುಮೋದನೆಯಾಗಿದ್ದು, ಅದರಂತೆ ಕಾಮಗಾರಿ ಸಂಕೇತ ಪಡೆಯಲು ಜಂಟಿ ಆಯುಕ್ತರು,

ಯಲಹಂಕ ವಲಯ ರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ಥಾವನೆಯನ್ನು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|---|
| 01 | 01 | Construction of Mini Vidhana Soudha at NES Circle in Ward No. 1 of Yelahanka Sub Division | 150.50 |
| | | **TOTAL:** | **150.50** |

ಅದರಂತೆ ಮೇಲ್ಕಂಡ ಕಾಮಗಾರಿಗೆ 2015–16ನೇ ಸಾಲಿನ ಅನುದಾನದಲ್ಲಿ ಕಾಮಗಾರಿ ಸಂಕೇತ ಹಾಗೂ ಹಣ ಮಂಜೂರು ಮಾಡಲು ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22–12–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## *12]. ವಿಷಯದ ಸಂಖ್ಯೆ: ತೆಆಸ್ಥಾಸ/24/2015–16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರರು (ಮಲ್ಲೇಶ್ವರಂ) ರವರು ವಾರ್ಡ್ ಸಂಖ್ಯೆ 64ರಲ್ಲಿ ನಿವೇಶನದ ಸಂಖ್ಯೆ 33/1, 1ನೇ ಮುಖ್ಯ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು ಇಲ್ಲಿ ಮಾಲಿಕರಾದ ಶ್ರೀಮತಿ ರಂಗಮ್ಮ ಮತ್ತು ಇತರರು ಕಟ್ಟಡವನ್ನು ನಿರ್ಮಿಸಿದ್ದು, ಸದರಿ ವಿಷಯದ ಬಗ್ಗೆ ಘನ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದು, ಅಂತಿಮವಾಗಿ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಆದೇಶ ನೀಡಲಾಗಿರುತ್ತದೆ. Dismantling of deviation portion of building at No. 3/1, 1st main P.G. Halli in ward no. 64 ಕಾಮಗಾರಿ ಮೊತ್ತ ರೂ. 1.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಕಡತದ ಪ್ರಸ್ಥಾವನೆಯಲ್ಲಿ ಲೆಕ್ಕಶೀರ್ಷಿಕೆ ಪಿ2103 ಅಡಿ ಜಾಬ್‌ಸಂಖ್ಯೆ ನೀಡಲು ಪ್ರಸ್ಥಾಪಿಸಲಾಗಿದೆ. 2015–16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ2103 ಅಡಿ ಅನುದಾನದ ಕೊರತೆ ಇರುವುದರಿಂದ ಲೆಕ್ಕಶೀರ್ಷಿಕೆ ಪಿ0055 ಒತ್ತುವರಿ ತೆರವು ವೆಚ್ಚಗಳು ಅಡಿ ಪರಿಗಣಿಸಿ ಭರಿಸಬೇಕಿರುತ್ತದೆ. ಆದರೆ ಪಿ–0055 ಅಡಿ ಅನುದಾನ ಲಭ್ಯವಿರುವುದಿಲ್ಲ.

ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿಮಾಡಿಕೊಳ್ಳಲಾಗುವುದು. 2015–16 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಒತ್ತುವರಿ ತೆರವು ವೆಚ್ಚಗಳು ಅಡಿ ಭರಿಸಬೇಕಿದ್ದು,ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: **P- 0055 "Encroachment clearance Expenses ( Demolition charges)" Budget Book Page No. 94** | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **20.00** | **11.52** | **35.70** | **0.00** | **1.00** |

ಮೇಲ್ಕಂಡಂತೆ 2015–16 ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 35.70 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಪ್ರತ್ಯೇಕ ಕಡತದಲ್ಲಿ ಪ್ರಸ್ಥಾವನೆ ಸಲ್ಲಿಸಲಾಗಿದೆ. ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಲಾಗುವ ವೆಚ್ಚ ರೂ. 1.00 ಲಕ್ಷಗಳನ್ನು 2015–16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ

ಅಳವಡಿಸಿಕೊಳ್ಳುವ ಬಗ್ಗೆ ಮತ್ತು ಹೆಚ್ಚುವರಿ ಮೊತ್ತ ರೂ. 1.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22–12–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## *13]. ವಿಷಯದ ಸಂಖ್ಯೆ: ತೆಆಸ್ಥಾಸ/25/2015–16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನ್ಯ ಶಾಸಕರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳಲು ಈ ಕೆಳಕಂಡ 3 ಕಾಮಗಾರಿಗಳ ಅಂದಾಜು ಮೊತ್ತ ರೂ. 15.90 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್‌ಎಲ್‌ಎಡಿಎಸ್(ಎಲ್‌ಎಆರ್) ಸಿ.ಆರ್/02/2015–16 ದಿನಾಂಕ: 09–11–2015 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ. ಹಾಗೂ ಸರ್ಕಾರದಿಂದ ಸ್ವೀಕರಿಸಲಾದ ಮೊತ್ತವನ್ನು ಪಾಲಿಕೆಯ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಿರುತ್ತದೆ.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Providing painting of sports characters for hte stuttle cock court and front wall of Shri Atal Bihari Vajapayi play ground in yediyur ward no 167 | 9.00 |
| 2 | Providing Vinile flooring for hte shuttle cock court in Yediyur ward no 167 | 3.20 |
| 3 | Providing Cladding and entrance gate and SS name plate to Ranadheera Kantirava park at Yediyur ward No. 167 | 3.70 |
| Total: | | 15.90 |

ಕಾರ್ಯಪಾಲಕ ಅಭಿಯಂತರರು (ಯೋಜನೆ) ದಕ್ಷಿಣ ರವರು ಅನುದಾನದ ಮುಂಗಡವಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 450800 / ದಿನಾಂಕ: 10–12–2015 ರಲ್ಲಿ ರೂ. 7,95,000–00 ಗಳ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ದಾಖಲಿಸಿರುತ್ತಾರೆ. 2015–16 ನೇ ಆಯವ್ಯಯದ ಪುಟ ಸಂಖ್ಯೆ 97 ರಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 1.00 ಲಕ್ಷಗಳನ್ನು ಮಾತ್ರ ಮೀಸಲಿರಿಸಿದೆ. ಪದ್ಮನಾಭನಗರ ವಿಧಾನಸಭಾ ಕ್ಷೇತ್ರಾಭಿವೃದ್ಧಿ ಯೋಜನೆ ಅಡಿ ರೂ. 149.90 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಲೆಕ್ಕಶೀರ್ಷಿಕೆ ಪಿ0583 ಅಡಿ ಅನುದಾನದ ಕೊರತೆ ಇರುವುದಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 15–6–2015ರ ವಿಷಯದ ಸಂಖ್ಯೆ: 84/2015–16 ಅನುಮೋದನೆಯಂತೆ ಲೆಕ್ಕಶೀರ್ಷಿಕೆ ಪಿ–0583 ಅಡಿ ಹೆಚ್ಚುವರಿಯಾಗಿ ರೂ. 149.90 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲಾಗಿದೆ. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಮೊತ್ತ ರೂ. 15.90 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ0583 ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

| | |
|---|---|
| **ನಿರ್ಣಯ:** | **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28–12–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.** |

## *14]. ವಿಷಯದ ಸಂಖ್ಯೆ: ತೆಆಸ್ಥಾಸ/26/2015-16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರರು (ಚಾಮರಾಜಪೇಟೆ) ರವರು ವಾರ್ಡ್ ಸಂಖ್ಯೆ 139ರಲ್ಲಿ ಅನಧೀಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವುದನ್ನು ತೆರವುಗೊಳಿಸುವ ಮೊತ್ತ ರೂ. 6.15 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿಮಾಡಿಕೊಳ್ಳಬೇಕಿದೆ. ಸದರಿ ವೆಚ್ಚವನ್ನು 2015-16 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಬೇಕಿದ್ದು,ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 94 | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **20.00** | **11.52** | **29.95** | **0.00** | **6.15** |

ಮೇಲ್ಕಂಡಂತೆ 2015-16 ರ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 8.48 ಲಕ್ಷಗಳು ಮಾತ್ರ ಲಭ್ಯವಿದ್ದು, ರೂ. 29.95 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಪ್ರತ್ಯೇಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಭರಿಸಲಾಗುವ ವೆಚ್ಚ ರೂ. 6.15 ಲಕ್ಷಗಳನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು. ಆದ್ದರಿಂದ ಹೆಚ್ಚುವರಿ ಮೊತ್ತ ರೂ. 6.15 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

| | |
|---|---|
| **ನಿರ್ಣಯ:** | **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22-12-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.** |

## *15]. ವಿಷಯದ ಸಂಖ್ಯೆ: ತೆಆಸ್ಥಾಸ/27/2015-16*

ಆಯುಕ್ತರ ದಿನಾಂಕ: 30.12.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ಟೆರ್ರಾಫಾರ್ಮ ಮತ್ತು ಎಂ.ಎಸ್.ಜಿ.ಪಿ ಸಂಸ್ಕರಣಾ ಘಟಕಗಳ ಸುತ್ತ ಮುತ್ತ ಇರುವ 44 ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಯ 44 ಕಾಮಗಾರಿಗಳ ಅಂದಾಜು ಮೊತ್ತ ರೂ. 510.40 ಲಕ್ಷಗಳಿಗೆ 14ನೇ ಹಣಕಾಸು ಆಯೋಗದ ಅನುದಾನ ಲೆಕ್ಕಶೀರ್ಷಿಕೆ ಪಿ-2200 ಅಡಿ ಜಾಬ್‌ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರು (ಯೋಜನೆ- ಪಶ್ಚಿಮ) ರವರು ಜಂಟಿ ಆಯುಕ್ತರು (ಘನತ್ಯಾಜ್ಯ) ಮತ್ತು ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಮೂಲಕ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಲೆಕ್ಕಶೀರ್ಷಿಕೆ: P2200- Works taken up under 14th Finance commission | | | | |
|---|---|---|---|---|
| **ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ** | **ಜಾಬ್‌ಸಂಖ್ಯೆ ನೀಡಿರುವ ಮೊತ್ತ** | **ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ** | **ಲಭ್ಯವಿರುವ ಅನುದಾನ** | **ಸದರಿ ಪ್ರಸ್ತಾವನೆಯ ಮೊತ್ತ** |
| **1000.00** | **5703.62** | **162.00** | **-4703.62** | 510.40 |

2015-16ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ2200 ಅಡಿ ರೂ. 1000.00 ಲಕ್ಷ ಅನುದಾನ ಮೀಸಲಿರಿಸಿದ್ದು, ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲು ಸಲ್ಲಿಸಿರುವ ರೂ.4703.62 ಲಕ್ಷಗಳ ಪ್ರಸ್ತಾವನೆಗೆ 2015-16ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಲೆಕ್ಕಶೀರ್ಷಿಕೆ ಪಿ2200 ಅಡಿ ಇದುವರೆವಿಗೂ ರೂ. 5703.62

ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಪ್ರಸ್ತಾವನೆಯ ಮೊತ್ತ ರೂ. 510.40 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಲೆಕ್ಕಶೀರ್ಷಿಕೆ ಪಿ2200 ಅಡಿ ಅನುದಾನ ಲಭ್ಯವಿರುವುದಿಲ್ಲ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿದೆ.

| Sl. No. | Name of Work | Est. Cost. (Rs. in Lakhs) |
|---|---|---|
| 1 | Supplying, installation & commissioning of 2000 LPH RO based high purity Drinking water treatment plant at Lingadeeranahalli in Sasalu Grama Panchayath of Doddaballapura Taluk. | 11.60 |
| 2 | Supplying, installation & commissioning of 2000 LPH RO based high purity Drinking water treatment plant at Sasalu in Sasalu Grama Panchayath of Doddaballapura Taluk. | 11.60 |
| 3 | Supplying, installation & commissioning of 2000 LPH RO based high purity Drinking water treatment plant at Kadappanahalli in Sasalu Grama Panchayath of Doddaballapura Taluk. | 11.60 |
| 4 | Supplying, installation & commissioning of 2000 LPH RO based high purity Drinking water treatment plant Gummanahalli in Sasalu Grama Panchayath of Doddaballapura Taluk. | 11.60 |
| 5 | Supplying, installation & commissioning of 2000 LPH RO based high purity Drinking water treatment plant at Sriramanahalli in Sasalu Grama Panchayath of Doddaballapura Taluk. | 11.60 |
| 6 | Supplying, installation & commissioning of 2000 LPH RO based high purity Drinking water treatment plant at Muchenahalli in Sasalu Grama Panchayath of Doddaballapura Taluk. | 11.60 |
| 7 | Supplying, installation & commissioning of 2000 LPH RO based high purity Drinking water treatment plant at Garudagallu in Sasalu Grama Panchayath of Doddaballapura Taluk. | 11.60 |
| 8 | Supplying, installation & commissioning of 2000 LPH RO based high purity Drinking water treatment plant at Chennaveeranahalli in Sasalu Grama Panchayath of Doddaballapura Taluk. | 11.60 |
| 9 | Supplying, installation & commissioning of 2000 LPH RO based high purity Drinking water treatment plant at Kasagatta in Hulikunte Grama Panchayath of Doddaballapura Taluk. | 11.60 |
| 10 | Supplying, installation & commissioning of 2000 LPH RO based high purity Drinking water treatment plant at Katthihosahalli in Hulikunte Grama Panchayath of Doddaballapura Taluk. | 11.60 |
| 11 | Supplying, installation & commissioning of 2000 LPH RO based high purity Drinking water treatment plant at Tumbukunte in Hulikunte Grama Panchayath of Doddaballapura Taluk. | 11.60 |
| 12 | Supplying, installation & commissioning of 2000 LPH RO based high purity Drinking water treatment plant at Hulikunte in Hulikunte Grama Panchayath of Doddaballapura Taluk. | 11.60 |
| 13 | Supplying, installation & commissioning of 2000 LPH RO based high purity Drinking water treatment plant at Mariyeggayanapalya in Hulikunte Grama Panchayath of Doddaballapura Taluk. | 11.60 |
| 14 | Supplying, installation & commissioning of 2000 LPH RO based high purity Drinking water treatment plant at Appakaranahalli in Hulikunte Grama Panchayath of Doddaballapura Taluk. | 11.60 |
| 15 | Supplying, installation & commissioning of 2000 LPH RO based high purity Drinking water treatment plant at Ambalagere in Hulikunte Grama Panchayath of Doddaballapura Taluk. | 11.60 |
| 16 | Supplying, installation & commissioning of 2000 LPH RO based high purity Drinking water treatment plant at Kanakenahalli Village in Bhaktharahalli Grama Panchayath of Doddaballapura Taluk. | 11.60 |
| 17 | Supplying, installation & commissioning of 2000 LPH RO based high purity Drinking water treatment plant at Alapannahalli in Bhaktharahalli Grama Panchayath of Doddaballapura Taluk. | 11.60 |
| 18 | Supplying, installation & commissioning of 2000 LPH RO based high purity Drinking water treatment plant at Bhaktharahalli in Bhaktharahalli Grama Panchayath of Doddaballapura Taluk. | 11.60 |
| 19 | Supplying, installation & commissioning of 2000 LPH RO based high purity Drinking water treatment plant at Kadathippur in Bhaktharahalli Grama Panchayath of Doddaballapura Taluk. | 11.60 |
| 20 | Supplying, installation & commissioning of 2000 LPH RO based high purity Drinking water treatment plant at Gundlahalli in Bhaktharahalli Grama Panchayath of Doddaballapura Taluk. | 11.60 |
| 21 | Supplying, installation & commissioning of 2000 LPH RO based high purity Drinking water treatment plant at Mudlalenahalli in Bhaktharahalli Grama Panchayath of Doddaballapura Taluk. | 11.60 |
| 22 | Supplying, installation & commissioning of 2000 LPH RO based high purity Drinking water treatment plant at Kalipalya in Bhaktharahalli Grama Panchayath of Doddaballapura Taluk. | 11.60 |
| 23 | Supplying, installation & commissioning of 2000 LPH RO based high purity Drinking water treatment plant at Karepura in DoddabelavangalaGrama Panchayath of Doddaballapura Taluk. | 11.60 |
| 24 | Supplying, installation & commissioning of 2000 LPH RO based high purity Drinking water treatment plant at Chikkabelavangala in Doddabelavangala Grama Panchayath of Doddaballapura Taluk. | 11.60 |
| 25 | Supplying, installation & commissioning of 2000 LPH RO based high purity Drinking water treatment plant at Rampura in Doddabelavangala Grama Panchayath of Doddaballapura Taluk. | 11.60 |
| 26 | Supplying, installation & commissioning of 2000 LPH RO based high purity Drinking water treatment plant at Doddabelavangala in Doddabelavangala Grama Panchayath of Doddaballapura Taluk. | 11.60 |
| 27 | Supplying, installation & commissioning of 2000 LPH RO based high purity Drinking water treatment plant at Doddahejjala in Doddabelavangala Grama Panchayath of Doddaballapura Taluk. | 11.60 |

| | | |
|---|---|---|
| 28 | Supplying, installation & commissioning of 2000 LPH RO based high purity Drinking water treatment plant at Akkathamanahalli in Bhaktharahalli Grama Panchayath of Doddaballapura Taluk. | 11.60 |
| 29 | Supplying, installation & commissioning of 2000 LPH RO based high purity Drinking water treatment plant at Lingapura in Bhaktharahalli Grama Panchayath of Doddaballapura Taluk. | 11.60 |
| 30 | Supplying, installation & commissioning of 2000 LPH RO based high purity Drinking water treatment plant at Halekotte in Bhaktharahalli Grama Panchayath of Doddaballapura Taluk. | 11.60 |
| 31 | Supplying, installation & commissioning of 2000 LPH RO based high purity Drinking water treatment plant at Karekallu Palya (Konnenahalli) in Sakregollahalli Grama Panchayath of Doddaballapura Taluk. | 11.60 |
| 32 | Supplying, installation & commissioning of 2000 LPH RO based high purity Drinking water treatment plant at Karadipalya (Kamana Agrahara) in Sakregollahalli Grama Panchayath of Doddaballapura Taluk. | 11.60 |
| 33 | Supplying, installation & commissioning of 2000 LPH RO based high purity Drinking water treatment plant at Karadipalya Upparigepalya (Appegowdanapalya) in Sakregollahalli Grama Panchayath of Doddaballapura Taluk. | 11.60 |
| 34 | Supplying, installation & commissioning of 2000 LPH RO based high purity Drinking water treatment plant at Bhovipalya (Sankarasanahalli) in Sakregollahalli Grama Panchayath of Doddaballapura Taluk. | 11.60 |
| 35 | Supplying, installation & commissioning of 2000 LPH RO based high purity Drinking water treatment plant at Doddamankanala in Sakregollahalli Grama Panchayath of Doddaballapura Taluk. | 11.60 |
| 36 | Supplying, installation & commissioning of 2000 LPH RO based high purity Drinking water treatment plant at Bommanahalli in Sakregollahalli Grama Panchayath of Doddaballapura Taluk. | 11.60 |
| 37 | Supplying, installation & commissioning of 2000 LPH RO based high purity Drinking water treatment plant at Kalenahalli in Sakregollahalli Grama Panchayath of Doddaballapura Taluk. | 11.60 |
| 38 | Supplying, installation & commissioning of 2000 LPH RO based high purity Drinking water treatment plant at Dyavasandra in Sakregollahalli Grama Panchayath of Doddaballapura Taluk. | 11.60 |
| 39 | Supplying, installation & commissioning of 2000 LPH RO based high purity Drinking water treatment plant at Sakregollahalli in Sakregollahalli Grama Panchayath of Doddaballapura Taluk. | 11.60 |
| 40 | Supplying, installation & commissioning of 2000 LPH RO based high purity Drinking water treatment plant at Sonnenahalli in Sakregollahalli Grama Panchayath of Doddaballapura Taluk. | 11.60 |
| 41 | Supplying, installation & commissioning of 2000 LPH RO based high purity Drinking water treatment plant at Koligere in Sakregollahalli Grama Panchayath of Doddaballapura Taluk. | 11.60 |
| 42 | Supplying, installation & commissioning of 2000 LPH RO based high purity Drinking water treatment plant at Chikkamanakanala in Sakregollahalli Grama Panchayath of Doddaballapura Taluk. | 11.60 |
| 43 | Supplying, installation & commissioning of 2000 LPH RO based high purity Drinking water treatment plant at Lingapura Colony in Sakregollahalli Grama Panchayath of Doddaballapura Taluk. | 11.60 |
| 44 | Supplying, installation & commissioning of 2000 LPH RO based high purity Drinking water treatment plant at Thanerahalli in Sakregollahalli Grama Panchayath of Doddaballapura Taluk. | 11.60 |
| | ಒಟ್ಟು ( ರೂ. ಲಕ್ಷಗಳಲ್ಲಿ) | **510.40** |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಘಟಕವಾದ ಟೆರ್ರಾಫಾರ್ಮನ ಸಂಸ್ಕರಣ ಘಟಕದ ಸುತ್ತಮುತ್ತಲಿನ ಧರಣಿ ನಿರತ ಗ್ರಾಮಸ್ಥರ ಬೇಡಿಕೆಗಳಿಗೆ ದಿನಾಂಕ: 06–11–2015ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಸಚಿವರುಗಳು ಸಮಾಲೋಚನೆ ನಡೆಸಿದ್ದು, ಶುದ್ದ ನೀರಿನ ಘಟಕಗಳ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ. ಸದರಿ ವೆಚ್ಚ ರೂ. 510.40 ಲಕ್ಷಗಳನ್ನು 2015–16ರ ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಿಕೊಳ್ಳಲಾಗುವುದು. ಆದ್ದರಿಂದ ಪಿ2200 ಅಡಿ ಹೆಚ್ಚುವರಿ ಅನುದಾನ ಅಳವಡಿಸಿಕೊಳ್ಳುವ ಬಗ್ಗೆ ಮತ್ತು ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

| | |
|---|---|
| **ನಿರ್ಣಯ:** | **ಆಯುಕ್ತರ ದಿನಾಂಕ: 30–12–2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.** |

## ***16]. ವಿಷಯದ ಸಂಖ್ಯೆ: ತೆಆಸ್ಥಾಸ/28/2015–16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.01.2016ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Providing scientific road humps from dabbaspet to Terra farma garbage processing unit on NH 207 ಕಾಮಗಾರಿಯ ಅಂದಾಜು ಮೊತ್ತ ರೂ. 36.00 ಲಕ್ಷಗಳಿಗೆ 14ನೇ ಹಣಕಾಸು ಆಯೋಗದ ಅನುದಾನ ಲೆಕ್ಕಶೀರ್ಷಿಕೆ

ಪಿ–2200 ಅಡಿ ಜಾಬ್‌ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರು (ಯೋಜನೆ– ಪಶ್ಚಿಮ) ರವರು ಜಂಟಿ ಆಯುಕ್ತರು (ಘನತ್ಯಾಜ್ಯ) ಮತ್ತು ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಮೂಲಕ ಪ್ರಸ್ಥಾವನೆ ಸಲ್ಲಿಸಿದ್ದು, 2015–16ರ ಆಯವ್ಯಯದಲ್ಲಿ 14 ನೇ ಹಣಕಾಸು ಆಯೋಗದ ಲೆಕ್ಕಶೀರ್ಷಿಕೆ ಪಿ2200 ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

| ಲೆಕ್ಕಶೀರ್ಷಿಕೆ: P2200- Works taken up under 14th Finance commission | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **1000.00** | 5703.62 | 162.00 | -4703.62 | 36.00 |

2015–16ರ ಆಯವ್ಯಯದಲ್ಲಿ ಲೆಕ್ಕಶಿರ್ಷಿಕೆ ಪಿ2200 ಅಡಿ ರೂ. 1000.00 ಲಕ್ಷ ಅನುದಾನ ಮೀಸಲಿರಿಸಿದ್ದು, ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲು ಸಲ್ಲಿಸಿರುವ ರೂ.4703.62 ಲಕ್ಷಗಳ ಪ್ರಸ್ಥಾವನೆಗೆ 2015–16ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಲೆಕ್ಕಶೀರ್ಷಿಕೆ ಪಿ2200 ಅಡಿ ಇದುವರೆವಿಗೂ ರೂ. 5703.62 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಪ್ರಸ್ಥಾವನೆಯ ಮೊತ್ತ ರೂ. 36.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಲೆಕ್ಕಶೀರ್ಷಿಕೆ ಪಿ2200 ಅಡಿ ಅನುದಾನ ಲಭ್ಯವಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಘಟಕವಾದ ಟೆರ್ರಾಫಾರ್ಮನ ಸಂಸ್ಕರಣ ಘಟಕದ ಸುತ್ತಮುತ್ತಲಿನ ಧರಣಿ ನಿರತ ಗ್ರಾಮಸ್ಥರ ಬೇಡಿಕೆಗಳಲ್ಲಿ road humps ನಿರ್ಮಾಣವು ಒಂದಾಗಿದ್ದು, ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಿದೆ. ಸದರಿ ವೆಚ್ಚ ರೂ. 36.00 ಲಕ್ಷಗಳನ್ನು 2015–16ರ ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಿಕೊಳ್ಳಲಾಗುವುದು. ಆದ್ದರಿಂದ ಪಿ2200 ಅಡಿ ಹೆಚ್ಚುವರಿ ಅನುದಾನ ಅಳವಡಿಸಿಕೊಳ್ಳುವ ಬಗ್ಗೆ ಮತ್ತು ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01–01–2016ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## *17]. ವಿಷಯದ ಸಂಖ್ಯೆ: ತೆಆಸ್ಥಾಸ/29/2015–16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.01.2016ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of Check post at Terrafirma and MSGP ಕಾಮಗಾರಿಯ ಅಂದಾಜು ಮೊತ್ತ ರೂ. 50.00 ಲಕ್ಷಗಳಿಗೆ 14ನೇ ಹಣಕಾಸು ಆಯೋಗದ ಅನುದಾನ ಲೆಕ್ಕಶೀರ್ಷಿಕೆ ಪಿ–2200 ಅಡಿ ಜಾಬ್‌ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರು (ಯೋಜನೆ– ಪಶ್ಚಿಮ) ರವರು ಜಂಟಿ ಆಯುಕ್ತರು (ಘನತ್ಯಾಜ್ಯ) ಮತ್ತು ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಮೂಲಕ ಪ್ರಸ್ಥಾವನೆ ಸಲ್ಲಿಸಿದ್ದು, 2015–16 ರ ಆಯವ್ಯಯದಲ್ಲಿ 14 ನೇ ಹಣಕಾಸು ಆಯೋಗದ ಲೆಕ್ಕಶೀರ್ಷಿಕೆ ಪಿ2200 ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

| ಲೆಕ್ಕಶೀರ್ಷಿಕೆ: P2200- Works taken up under 14th Finance commission | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **1000.00** | 5703.62 | 112.00 | -4703.62 | 50.00 |

2015–16ರ ಆಯವ್ಯಯದಲ್ಲಿ ಲೆಕ್ಕಶಿರ್ಷಿಕೆ ಪಿ2200 ಅಡಿ ರೂ. 1000.00 ಲಕ್ಷ ಅನುದಾನ ಮೀಸಲಿರಿಸಿದ್ದು, ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲು ಸಲ್ಲಿಸಿರುವ ರೂ.4703.62 ಲಕ್ಷಗಳ ಪ್ರಸ್ಥಾವನೆಗೆ 2015–16ರ ಪರಿಷ್ಕೃತ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು

ಹೆಚ್ಚುವರಿಯಾಗಿ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಲೆಕ್ಕಶೀರ್ಷಿಕೆ ಪಿ2200 ಅಡಿ ಇದುವರೆವಿಗೂ ರೂ. 5703.62 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಪ್ರಸ್ಥಾವನೆಯ ಮೊತ್ತ ರೂ. 50.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಲೆಕ್ಕಶೀರ್ಷಿಕೆ ಪಿ2200 ಅಡಿ ಅನುದಾನ ಲಭ್ಯವಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಘಟಕವಾದ ಟೆರ್ರಾಫಾರ್ಮನ ಸಂಸ್ಕರಣ ಘಟಕದ ಸುತ್ತಮುತ್ತಲಿನ ಧರಣಿ ನಿರತ ಗ್ರಾಮಸ್ಥರ ಬೇಡಿಕೆಗಳಿಗೆ ದಿನಾಂಕ 06-11-2015ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಸಚಿವರುಗಳು ಸಮಾಲೋಚನೆ ನಡೆಸಿದ್ದು, ಚೆಕ್‌ಪೋಸ್ಟ್ ನಿರ್ಮಾಣವು ಗ್ರಾಮಸ್ಥರ ಬೇಡಿಕೆಗಳಲ್ಲಿ ಒಂದಾಗಿರುತ್ತದೆ. ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಿದೆ. ಸದರಿ ವೆಚ್ಚ ರೂ. 50.00 ಲಕ್ಷಗಳನ್ನು 2015-16ರ ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಿಕೊಳ್ಳಲಾಗುವುದು. ಆದ್ದರಿಂದ ಪಿ2200 ಅಡಿ ಹೆಚ್ಚುವರಿ ಅನುದಾನ ಅಳವಡಿಸಿಕೊಳ್ಳುವ ಬಗ್ಗೆ ಮತ್ತು ಕಾಮಗಾರಿ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-01-2016ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

### *18]. ವಿಷಯದ ಸಂಖ್ಯೆ: ತೆಆಸ್ಥಾಸ/30/2015-16*

ಆಯುಕ್ತರ ದಿನಾಂಕ: 15-12-2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಘಟಕ, ಬೆಂಗಳೂರು ಇವರ ದೈನಂದಿನ ಕೆಲಸಗಳ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಅರಣ್ಯ ಕಾಮಗಾರಿಗಳ ಅನುಭವ ಇರುವ ಸಲಹೆಗಾರರ ಸೇವೆ ಅತ್ಯಂತ ಅವಶ್ಯಕವಾಗಿರುತ್ತದೆ.

ಎಂಟು ವಲಯಗಳಲ್ಲಿ ಅರಣ್ಯೀಕರಣ ಕಾಮಗಾರಿಗಳು ನಿರ್ವಹಣೆಯಾಗುತ್ತಿರುತ್ತದೆ. ಇದಲ್ಲದೆ ಎಲ್ಲಾ ವಲಯಗಳಲ್ಲಿ ಮರಗಳ ವ್ಯವಸ್ಥಿತ ಕಾರ್ಯನಿರ್ವಹಣೆಯೂ ಸಹ ಆಗುತ್ತಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ವ್ಯಾಪ್ತಿಯಲ್ಲಿ ಎರಡು ವಿಭಾಗಗಲಿದ್ದು, ಪ್ರಸುತ್ತ ಎರಡು ವಿಭಾಗಗಳಿಗೂ ಒಬ್ಬರೇ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇರುತ್ತಾರೆ. ಆದ್ದರಿಂದ ವಿಭಾಗ ಮಟ್ಟದ ಕಾರ್ಯವ್ಯಾಪ್ತಿ ಪಾಲಿಕೆಯ 8 ವಲಯಗಳಿಗೆ ಒಳಪಡುತ್ತದೆ. ಈ ಕಾರಣ ಅರಣ್ಯೀಕರಣ ಕಾಮಗಾರಿಗಳ ಕಾರ್ಯನಿರ್ವಹಣೆಯು ಅರಣ್ಯ ನಿಯಮಗಳ ಮತ್ತು ಕರ್ನಾಟಕ ನಾಗರಿಕ ಸೇವಾನಿಯಮಗಳ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ನಿರ್ವಹಿಸಲು ಸೂಕ್ತ ಉಸ್ತುವಾರಿ ಸಲುವಾಗಿ ಅರಣ್ಯೀಕರಣ ಕಾಮಗಾರಿಗಳ ಮತ್ತು ಕಛೇರಿ ಕಾರ್ಯನಿರ್ವಹಣೆಯ ಅನುಭವ ಹೊಂದಿರುವ ಒಬ್ಬ ಸಲಹೆಗಾರರ ಅವಶ್ಯಕತೆ ಇರುತ್ತದೆ.

ಈ ಕಾರಣ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಪೂರ್ಣ ಪ್ರಮಾಣದ ಸೇವೆ ಸಲ್ಲಿಸಿ, ಅನುಭವ ಹೊಂದಿರುವವರನ್ನು ಸಲಹೆಗಾರರನ್ನಾಗಿ ಪಡೆದು, ವಿಭಾಗ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವತ್ತ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅಗತ್ಯವಾಗಿರುತ್ತದೆಂದು ವರದಿ ನೀಡಿದ್ದು.

ಈ ಹಿನ್ನೆಲೆಯಲ್ಲಿ ಶ್ರೀ ಶೇಷಗಿರಿರಾವ್, ನಿವೃತ್ತ ಅಧೀಕ್ಷಕರು, ಇವರನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಕಛೇರಿಯಲ್ಲಿ ಸಲಹೆಗಾರರಾಗಿ ದಿನಾಂಕ: 01.08.2015 ರಿಂದ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.20,000-00ಗಳ ಸಂಚಿತ ವೇತನದ ಆಧಾರದ ಮೇಲೆ ನಿಯೋಜನೆ ಮಾಡಿಕೊಳ್ಳುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 15-12-2015ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

(ಎಮ್. ಶಿವರಾಜು)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**